ನಿಮ್ಮ ಜಿಲ್ಲೆಯಲ್ಲಿ ನೋಡೋಕೆ ಯಾವ ಸ್ಥಳಗಳು ಚೆನ್ನಾಗಿವೆ? ಯಾವ ಪ್ರದೇಶದಲ್ಲಿ ನಿಂತರೆ ಸನ್‌ಸೆಟ್ ಅಥವಾ ಸನ್‌ರೈಸ್ ಚೆನ್ನಾಗಿ ಕಾಣುತ್ತೆ? ಹತ್ತಿರದಲ್ಲಿ ಎಲ್ಲಿಯಾದರೂ ಜಲಪಾತಗಳು ಇವೆಯಾ? ಹೋಮ್‌ಸ್ಟೇ ಅಥವಾ ಫಾರ್ಮ್ ಸ್ಟೇ ಯಾವುದು ಉತ್ತಮ? ಯಾವ ಹೋಟೆಲ್‌ನಲ್ಲಿ ಉಳಿದುಕೊಳ್ಳಬಹುದು?

ಇಂತಹ ಹಲವು ಪ್ರಶ್ನೆಗಳೊಂದಿಗೆ ಮಳೆಗಾಲದ ಪ್ರವಾಸಕ್ಕೆ ಅಣಿಯಾಗುತ್ತಿದ್ದವರಿಗೆ ಹೆಚ್ಚು'ವರಿ' ಪ್ರಶ್ನೆಪತ್ರಿಕೆಯೊಂದನ್ನು ಮುಂದಿಟ್ಟಿದೆ ಕೋವಿಡ್ ಬಿಕ್ಕಟ್ಟು. 'ನಿಮ್ಮ ಜಿಲ್ಲೆಗೆ ಬರಬೇಕೆಂದರೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿರಲೇಬೇಕಾ? ಕೋವಿಡ್ ನೆಗೆಟಿವ್ ರಿಪೋರ್ಟ್ ಇರಲೇಬೇಕಾ? ರೆಸಾರ್ಟ್, ಹೋಮ್‌ಸ್ಟೇಗಳೆಲ್ಲ ಓಪನ್ ಇರುತ್ತವೆಯಾ? ಒಂದು ಡೋಸ್ ಲಸಿಕೆ ತೆಗೆದುಕೊಂಡಿದ್ದರೆ ಸಾಕಾ ಅಥವಾ ಎರಡೂ ಡೋಸ್ ಪಡೆದಿರಲೇಬೇಕಾ? ಎಂದು ಕೇಳುವುದರೊಂದಿಗೆ 'ಪ್ರವಾಸ'ದ ಪರಿ ಬದಲಾಗಿದೆ; ಪ್ರವಾಸದೊಂದಿಗೆ ವರಿಯೂ ಸೇರಿಕೊಂಡಿದೆ.

ಬದಲಾಗಿರುವುದು ಪ್ರಶ್ನೆಗಳು ಮಾತ್ರವಲ್ಲ, ಪ್ರವಾಸೋದ್ಯಮವನ್ನೇ ನಂಬಿಕೊಂಡಿರುವವರ ಬದುಕು ಕೂಡ. ಲಾಕ್‌ಡೌನ್, ಕರ್ಫ್ಯೂನಂತಹ ಕ್ರಮಗಳು ಹೀಗೇ ಮುಂದುವರಿಯುತ್ತಿದ್ದರೆ, ಪ್ರವಾಸ, ಪ್ರವಾಸ ಸಾರಿಗೆ ಮತ್ತು ಆತಿಥ್ಯ ವಲಯವನ್ನೇ ನಂಬಿಕೊಂಡಿರುವ 30 ಲಕ್ಷಕ್ಕೂ ಹೆಚ್ಚು ಮಂದಿ ಬೀದಿಗೆ ಬೀಳಲಿದ್ದಾರೆ ಎಂಬ ಆತಂಕ ಈ ವಲಯದ ತಜ್ಞರದ್ದು.

ಬೆಂಗಳೂರಿನ ಟ್ಯಾಕ್ಸಿ ಚಾಲಕ, ಮೈಸೂರಿನ ಟಾಂಗಾವಾಲಾ, ಕೊಡಚಾದ್ರಿಯ ಜೀಪ್ ಡ್ರೈವರ್, ಬಾದಾಮಿಯಲ್ಲಿ ಬುತ್ತಿಗಂಟು ತಂದು ಮಾರುವ ಹೊನ್ನಮ್ಮ, ಮುಳ್ಳಯ್ಯನ ಗಿರಿಯಲ್ಲಿ ಸುಟ್ಟ ಮೆಕ್ಕೆಜೋಳ ಕೊಡುವ ಮೆಹಬೂಬ್ ಸಾಬ್, ಚಿಕ್ಕಮಗಳೂರಿನಲ್ಲಿ ಹೋಮ್‌ಸ್ಟೇ ಇಟ್ಟುಕೊಂಡಿರುವ ಕಾರ್ತಿಕ್‌ನಂತಹ ಲಕ್ಷಾಂತರ ಜನರ ಬದುಕು ಮತ್ತು ಭವಿಷ್ಯ ನಿರ್ಧರಿಸುವ ಪ್ರವಾಸೋದ್ಯಮವು ರಾಜ್ಯದಲ್ಲಿ 'ಪ್ರಯಾಸೋದ್ಯಮ' ಆಗುತ್ತಿದೆ. ಹಲವು ನಿರ್ಬಂಧಗಳು, ನಾಲ್ಕೈದು ಪಟ್ಟು ಹೆಚ್ಚು ದುಡ್ಡು ವಸೂಲಿ, ಜನರಲ್ಲಿ ಹಣದ ಹರಿವು ಕಡಿಮೆಯಾಗಿರುವುದು, ಹೀಗೆ ಸಮಸ್ಯೆಗಳು ಪರಸ್ಪರ ಹೆಣೆದುಕೊಂಡು ಪ್ರವಾಸೋದ್ಯಮವನ್ನು ಮಂಕಾಗಿಸಿವೆ.

## ಒಂದು ರಾಜ್ಯ, ಹಲವು ಆದೇಶ!

'ಒಂದು ರಾಜ್ಯ, ಹಲವು ಜಗತ್ತು' ಎಂಬುದು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯ. ಆದರೆ, ಕೋವಿಡ್ ಬಿಕ್ಕಟ್ಟು ಪ್ರಾರಂಭವಾದಾಗಿನಿಂದ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಆದೇಶ, ಸುತ್ತೋಲೆಗಳು ಈ ಉದ್ಯಮವನ್ನು ಹೈರಾಣಾಗಿಸಿವೆ.

ಕೊಡಚಾದ್ರಿ, ಚಿಕ್ಕಮಗಳೂರಿನ ಹೋಮ್‌ಸ್ಟೇ, ಫಾರ್ಮ್‌ಸ್ಟೇ ಅಥವಾ ರೆಸಾರ್ಟ್‌ಗಳಲ್ಲಿ ಉಳಿದುಕೊಳ್ಳಬೇಕೆಂದರೆ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಹೊಂದಿರುವುದು ಕಡ್ಡಾಯ. ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು, ಐಹೊಳೆ, ಬಾದಾಮಿಯಂತಹ 'ಸ್ಮಾರಕ ಶ್ರೀಮಂತಿಕೆ'ಯ ಊರುಗಳಲ್ಲಿ ಓಡಾಡುವಾಗ ನಿಮಗೆ ಯಾವುದೇ ವರದಿ ಬೇಕಿಲ್ಲ.

ಇನ್ನು, ಚಾಮರಾಜನಗರ ಜಿಲ್ಲೆಯ ಬಂಡೀಪುರ ರಾಷ್ಟ್ರೀಯ ಉದ್ಯಾನದೊಳಗೆ ಸಫಾರಿ




ಜೋಗ ಭೋರ್ಗರೆಯುತ್ತಿದೆ;
ಬಣ್ಣದ ಕೊಡೆಗಳ
ಸುಳಿವಿಲ್ಲವಷ್ಟೆ?
ಚಿತ್ರ: ತಾಜುದ್ದೀನ್ ಆಜಾದ್